(ಇಂದು ದಿಃ 25-10-2024 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು)
ಮುಂದುವರೆದ ಪಾಟೀ ಸವಾಲು **:- ಶ್ರೀ.RM** ವಕೀಲರಿಂದ **:-**

ನಾವು ವಾದಿಯರಿಗೆ ನೋಟಿಸ ಕೊಡದೆ ಅವರಿಗೆ ಗೊತ್ತಾಗದ ರೀತಿಯಲ್ಲಿ ಮುಟೇಷನ ಮಾಡಿಕೊಂಡಿದ್ದೆವೆ ಎಂದರೆ ಸರಿಯಲ್ಲ. ನನ್ನ ತಂದೆ ತಾಯಿ ದಾವಾ ಸ್ವತ್ತುಗಳಲ್ಲಿ ಸ್ವಾಧಿನದಲ್ಲಿದ್ದರು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆಸ್ತಿಯನ್ನು ಸಿದ್ದಮ್ಮನ ಹೆಸರಿಗೆ ವರ್ಗಾವಣಿ ಮಾಡುವ ಅಧಿಕಾರ ನನ್ನ ತಂದೆಗೆ ಇರಲ್ಲಿಲ್ಲ ಎಂದರೆ ಸರಿಯಲ್ಲ. 1976 ರಿಂದ ನನ್ನ ತಂದೆ ದಾವಾ ಸ್ವತ್ತಿನ ಸ್ವಾಧಿನದಲ್ಲಿದ್ದರು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು, ನಾಗರೆಡ್ಡಿ ಹಣಮಂತರೆಡ್ಡಿಯ ಹೆಂಡತಿ ವೆಂಕಟಮ್ಮ ರವರು ದಾವಾ ಸ್ವತ್ತಿಗೆ ಸಂಬಂಧ ಇಲ್ಲದೆ ಇದ್ದರೂ ಕೂಡ

ವಾದಿಯರಿಗೆ ಗೊತ್ತಾಗದ ರೀತಿಯಲ್ಲಿ ಪಾಲು ವಿಭಾಗ ಮಾಡಿಕೊಂಡಿದ್ದೇವೆ ಎಂದರೆ ಸರಿಯಲ್ಲ. ನಮ್ಮ ನಡಮೆ ವಿಭಾಗ ಆದ ಬಗ್ಗೆ ದಾಖಲಾತಿ ಹಾಜರುಪಡಿಸಿದ್ದೇನೆ. ದಾವಾ ಸ್ವತ್ತಿಗೆ ನಾವು ಸಂಬಂಧಪಡದೆ ಇರುವ ಕಾರಣ ಅದನ್ನು ಭಾಗ ಮಾಡಿಕೊಳ್ಳುವ ಅಧಿಕಾರ ನಮಗೆ ಇರಲಿಲ್ಲ ಎಂದರೆ ಸರಿಯಲ್ಲ. 3 ಮತ್ತು 4 ನೇ ಪ್ರತಿವಾದಿಯರು ಮತ್ತು ನಾನು ದಾವಾ ಸ್ವತ್ತುಗಳಿಗೆ ಯಾವುದೇ ರೀತಿ ಸಂಬಂಧ ಹೊಂದಿಲ್ಲ ಎಂದರೆ ಸರಿಯಲ್ಲ. ಯಾವುದೇ ಮಾಲಿಕತ್ವದ ಹಕ್ಕು ಇಲ್ಲದೆ ಇರುವ ಕಾರಣ ತಲಾ 2 ಎಕರೆ 6 ಗುಂಟೆ ಹಂಚಿಕೊಂಡಿರುವುದು ಕಾನೂನು ಬಾಹಿರಿ ಎಂದರೆ ಸರಿಯಲ್ಲ.

4 ನೇ ಪ್ರತಿವಾದಿಗೆ ದಾವಾ ಸ್ವತ್ತಿನ ಮೇಲೆ ಯಾವುದೇ ಹಕ್ಕು ಅಧಿಕಾರ ಮತ್ತು ಮಾಲಿಕತ್ವ ಇಲ್ಲದೆ ಇದ್ದರೂ ಕೂಡ 5 ನೇ ಪ್ರತಿವಾದಿಗೆ ಮಾರಾಟ ಮಾಡಿರುವುದು ಕಾನೂನು ಬಾಹಿರ ಎಂದರೆ ಸರಿಯಲ್ಲ. ಅದೇ ರೀತಿ ವೆಂಕಟಮ್ಮ ಮಾಲಿಕತ್ವದ ಹಕ್ಕು ಇಲ್ಲದಿದ್ದರೂ ಕೂಡ 6 ನೇ ಪ್ರತಿವಾದಿಗೆ ದಾವಾ ಜಮೀನನ್ನು ಮಾರಾಟ ಮಾಡಿರುವುದು ಕಾನೂನು ಬಾಹಿರ ಎಂದರೆ ಸರಿಯಲ್ಲ. ಆ 2 ಕ್ರಯ ಪತ್ರಗಳು ಉರ್ಜಿತವಲ್ಲ ಮತ್ತು ವಾದಿಯರಿಗೆ ಬಂಧನಕಾರಕ ಅಲ್ಲ ಎಂದರೆ ಸರಿಯಲ್ಲ. ಸಿದ್ದಪ್ಪನ ತಂದೆಗೆ ಇಬ್ಬರು ಹೆಂಡತಿಯರು ಇದ್ದರು ಎಂದು ಮತ್ತು ಸಿದ್ದಪ್ಪ 2 ನೇ ಹೆಂಡತಿ ಮಗ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಇವತ್ತಿಗೂ 2 ಎಕರೆ ವಾದಿ ತಂದೆ ಸಾಬಣ್ಣನ ಹೆಸರಿನಲ್ಲಿದೆ ಎಂದರೆ ಸರಿ. ಸಾಬಣ್ಣ ತೀರಿಹೋದ ನಂತರ ಅವರ ಹೆಸರಿನಲ್ಲಿದ್ದ ಜಮೀನನ್ನು ತಮ್ಮ ಹೆಸರಿಗೆ ಮಾಡಿಕೊಡುವಂತೆ ಕೋರಿ ಸಾಬಣ್ಣನ 2 ನೇ ಹೆಂಡತಿ ಮಕ್ಕಳು ಕಂದಾಯ ಇಲಾಖೆಗೆ ಯಾವುದೇ ಅರ್ಜಿ ಕೊಟ್ಟಿಲ್ಲ. ಸಾಬಣ್ಣನ 2 ನೇ ಹೆಂಡತಿ ಮಕ್ಕಳು ಮತ್ತು ನಾವು ದಾವಾ ಸ್ವತ್ತಿಗೆ ಸಂಬಂಧಪಟ್ಟವರು ಅಲ್ಲ ಎಂದರೆ ಸರಿಯಲ್ಲ. ನಾವು ಯಾವತ್ತು ದಾವಾ ಸ್ವತ್ತಿನ ಮಾಲಿಕರು ಮತ್ತು ಕಬ್ಜಾದಾರರು ಅಲ್ಲ ಎಂದರೆ ಸರಿಯಲ್ಲ. ನಾನು ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನಕ್ಕೆ ಬೆರಳಚ್ಚು ಮಾಡಿಸಲಾಯಿತು)

ಓ. ಹೇ. ಕೇ. ಸರಿ. ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು,ಸೇಡಂ.